

# ಹದಿನಾರಾಣೆ ಕನ್ನಡ ಪ್ರತಿಭೆ

ಕೃಷ್ಣಸುಂದರಿ ಎಂದರೆ ಬೇಸರ, ಪ್ರಯೋಗಗಳ ಬಗ್ಗೆ ಕಾತರ, ಸಾಗಿಬಂದ ಹಾದಿಯ ಬಗ್ಗೆ ವಿಷಾದಗಳಿಲ್ಲದ ತೆರೆದ ಮನಸು, ವ್ಯಕ್ತಿತ್ವದ ಬೆಳವಣಿಗೆಯತ್ತ ತುಡಿತ, ಬದುಕೆಂದರೆ ಸಿನಿಮಾ ಅಷ್ಟೇ ಅಲ್ಲ ಎನ್ನುವ ಖಾಚಿತ್ಯ– ಇವರು ನಿವೇದಿತಾ, ಅಪ್ಪಟ ಕನ್ನಡ ಚೆಲುವೆ.

ಕವಿತಾ ಲಂಕೇಶರ 'ಅವ್ವ' ಚಿತ್ರದ ಮೂಲಕ ನಾಯಕಿಯಾಗಿ ಬಡ್ತಿ ಹೊಂದಿದ ನಿವೇದಿತಾ ಕನ್ನಡ ಚಿತ್ರರಸಿಕರ ಗಮನಸೆಳೆದು ಆರು ವರ್ಷಗಳ ಮೇಲಾಯಿತು. ಆಗಿನ್ನೂ ಅವರು ಸ್ಮಿತಾ ಆಗಿಯೇ ಉಳಿದಿದ್ದರು. ಲಂಕೇಶರ 'ಮುಸ್ಸಂಜೆಯ ಕಥಾಪ್ರಸಂಗ' ಕಥನದ ಉಕ್ಕು ಹರೆಯದ ಸಾವಂತ್ರಿ ಪಾತ್ರಕ್ಕೆ ಜೀವ ತುಂಬಿದ್ದ ಸ್ಮಿತಾ, ಚುಂಬನ ದೃಶ್ಯಗಳಲ್ಲಿ ನಿರ್ಭಿಡೆಯಿಂದ ಭಾಗಿಯಾಗಿದ್ದರು. ಸ್ಮಿತಾ ಅವರ ನಟನೆಯ ಬಗ್ಗೆ ಒಳ್ಳೆಯ ಮಾತುಗಳು ವ್ಯಕ್ತವಾದರೂ, ಆ ಮೆಚ್ಚುಗೆ ಅವಕಾಶಗಳ ರೂಪದಲ್ಲಿ ಒದಗಿಬರಲಿಲ್ಲ. ಹಾಗಾಗಿ ಪರಭಾಷಾ ಚಿತ್ರಗಳತ್ತ ಗಮನಹರಿಸಿದ ಅವರು, ಕೆಲವು ತಮಿಳು ಸಿನಿಮಾಗಳಲ್ಲಿ ಅಭಿನಯಿಸಿದರು. ಆಗೊಮ್ಮೆ ಈಗೊಮ್ಮೆ ಕನ್ನಡ ಚಿತ್ರಗಳಲ್ಲಿ ನಟಿಸಿದರೂ ಅವರು ಚಿತ್ರರಸಿಕರ ನೆನಪಿನಲ್ಲಿ ಉಳಿದಿದ್ದು ಕಡಿಮೆ.

ಸ್ಮಿತಾ ಹೆಸರು ಬದಲಿಸಿಕೊಂಡು ನಿವೇದಿತಾ ಆದದ್ದು ಕೂಡ ಅವರಿಗೆ ಅದೃಷ್ಟ ತಂದುಕೊಡಲಿಲ್ಲ. 'ಪರಿ' (2011) ಚಿತ್ರದಲ್ಲಿ ಮೈ ಚಳಿ ಬಿಟ್ಟು ನಟಿಸಿದ್ದೂ ಉಪಯೋಗವಾಗಲಿಲ್ಲ. ಅದೇ ನಿವೇದಿತಾ ಈಗ 'ಡಿಸೆಂಬರ್ 1' ಚಿತ್ರದ ಮೂಲಕ ಮತ್ತೆ ಕನ್ನಡಿಗರ ಮುಂದಿದ್ದಾರೆ.

'ಡಿಸೆಂಬರ್ 1' ಚಿತ್ರದಲ್ಲಿ ನಿವೇದಿತಾ ಅವರದು ರೊಟ್ಟಿಯನ್ನು ಮಾರಿ ಕುಟುಂಬ ನಡೆಸುವ ದೇವಕ್ಕ ಎನ್ನುವ ಗೃಹಿಣಿಯ ಪಾತ್ರ. ಕುಂಟ ಗಂಡ, ಕಣ್ಣು ಕಾಣದ ಅತ್ತೆ ಹಾಗೂ ಎರಡು ಮಕ್ಕಳ ಸಂಸಾರವನ್ನು ತೂಗಿಸುವ ಸ್ವಾಭಿಮಾನಿ ಹೆಣ್ಣಿನ ಪಾತ್ರವನ್ನು ನಿವೇದಿತಾ ನಿರ್ವಹಿಸಿರುವ ರೀತಿ ತುಂಬಾ ಚೆನ್ನಾಗಿದೆ. ಉತ್ತರ ಕರ್ನಾಟಕದ ಕಪ್ಪು ನೆಲದ ಫಲವತ್ತತೆಯಂತೆಯೇ ಆಕೆ ಜೀವ ತುಂಬಿರುವ ಪಾತ್ರವೂ ಸೊಗಸಾಗಿದೆ. ಪಿ. ಶೇಷಾದ್ರಿ ನಿರ್ದೇಶನದ ಈ ಚಿತ್ರದಲ್ಲಿನ ಅವರ ಪಾತ್ರ ಅತ್ಯುತ್ತಮ ನಟಿ ರಾಷ್ಟ್ರಪ್ರಶಸ್ತಿ ಸ್ಪರ್ಧೆಯಲ್ಲಿ ಇತ್ತಂತೆ.

ಮಳೆ, ತುಪ್ಪ ಎಂದು ಕುಣಿಯುತ್ತ ಅವಕಾಶ ಗಿಟ್ಟಿಸಿಕೊಳ್ಳುವ ಹುಡುಗಿಯರ ನಡುವೆ ನಿವೇದಿತಾ ನತದೃಷ್ಟೆಯಂತೆ ಕಾಣಿಸುತ್ತಾರೆ. ಆದರೆ, 'ಬೆಳವಣಿಗೆ ಎಂದರೆ ಸಿನಿಮಾಗಳ ಸಂಖ್ಯೆಯಷ್ಟೇ ಅಲ್ಲ' ಎನ್ನುವ, ಸಿನಿಮಾ ಜೀವನದ ಒಂದು ಭಾಗವಷ್ಟೇ ಎನ್ನುವ ನಿಲುವಿನ ಅವರು ಚಿತ್ರರಂಗದ ಇತರ ನಾಯಕಿಯರಿಂತಲೂ ಭಿನ್ನ ಎನ್ನಿಸುತ್ತಾರೆ.

# ಆಲ್‌ರೌಂಡರ್!



ತಾರಾ ವರ್ಚಸ್ಸಿನ ದೊಡ್ಡ ಬಜೆಟ್‌ನ ಸಾಲು ಸಾಲು ಸಿನಿಮಾಗಳು ತೆರೆ ಕಾಣಲು ಸಿದ್ಧವಾಗಿದ್ದು, ಈ ಸರತಿಗೆ ಸುದೀಪ್‌ರ 'ಮಾಣಿಕ್ಯ' ಚಿತ್ರ ಮೇ ತಿಂಗಳ ಮೊದಲ ವಾರದಲ್ಲಿ ಚಾಲನೆ ನೀಡುತ್ತಿದೆ. ತೆಲುಗಿನ ಮಿರ್ಚಿ ಚಿತ್ರದ ರೀಮೇಕ್ ಇದು. ತಮಿಳು ಸಿನಿಮಾಗಳು ಹಾಗೂ ಕ್ರಿಕೆಟ್ ನೆಪದಲ್ಲಿ ಕನ್ನಡ ಚಿತ್ರ ಪ್ರೇಕ್ಷಕರಿಗೆ ಸುದೀಪ್ ಅಪರೂಪವಾಗಿದ್ದು, ಆ ಕಾರಣದಿಂದಲೇ 'ಮಾಣಿಕ್ಯ' ಸಿನಿಮಾ ಕುರಿತ ನಿರೀಕ್ಷೆಗಳೂ ಹೆಚ್ಚಾಗಿವೆ. ಇದಕ್ಕೆ ತಕ್ಕನಾಗಿ ಸಿನಿಮಾ ತೆರೆ ಕಾಣುವ ಮೊದಲೇ ಅದರ ಡಬ್ಬಿಂಗ್ ಹಕ್ಕುಗಳು (ಹಿಂದಿ ಹಾಗೂ ತಮಿಳು) ಮಾರಾಟವಾಗಿವೆ.

ಹಿಂದಿ ಚಿತ್ರವೊಂದರ ಡಬ್ಬಿಂಗ್‌ಗೆಂದೇ ಸುಮಾರು ಒಂದೂವರೆ ಕೋಟಿ ರೂಪಾಯಿ ಪಡೆಯಲಾಗಿದೆ ಎನ್ನುತ್ತಿದೆ ಗಾಂಧಿನಗರ. ಸ್ಯಾಟಲೈಟ್ ಹಕ್ಕು ಕೂಡ ದೊಡ್ಡ ಬೆಲೆಗೆ ಮಾರಾಟವಾಗಿದ್ದು, ಅಲ್ಲಿಗೆ ಬಾಕ್ಸ್ ಆಫೀಸ್‌ನ ಹೊಸ ದಾಖಲೆಗಳೊಂದಿಗೆ ಮಾಣಿಕ್ಯ ಬಿಡುಗಡೆಯಾಗುತ್ತಿದೆ ಎನ್ನಬಹುದು.

ನಟನೆಯ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ಸುದೀಪ್ ವಹಿಸಿಕೊಂಡಿರುವುದು ಈ ಸಿನಿಮಾದ ವಿಶೇಷಗಳಲ್ಲೊಂದು. ಜೊತೆಗೆ, ಹಿರಿಯ ನಟ ರವಿಚಂದ್ರನ್ ಅವರು ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದಾರೆ. ರಮ್ಯಕೃಷ್ಣ ತಾರಾಗಣದಲ್ಲಿನ ಮತ್ತೊಂದು ಆಕರ್ಷಣೆ. ಅರ್ಜುನ್ ಜನ್ಯ ಸಂಗೀತ ಹಾಗೂ ಚಂದ್ರ ಅವರ ಛಾಯಾಗ್ರಹಣ ಚಿತ್ರಕ್ಕಿದೆ.

'ಮಾಣಿಕ್ಯ'ದ ಬೆನ್ನಿಗೇ ಸುದೀಪ್ ತಮಿಳು ಚಿತ್ರವೊಂದರಲ್ಲಿ ನಟಿಸುವ ಸುದ್ದಿ ಹೊರಬಿದ್ದಿದೆ. ತಮಿಳಿನ ಸೂಪರ್‌ಸ್ಟಾರ್‌ಗಳಲ್ಲಿ ಒಬ್ಬರಾದ ವಿಜಯ್ ಅವರ ಸಿನಿಮಾದಲ್ಲಿ ವಿಲನ್ ಪಾತ್ರವನ್ನು ಸುದೀಪ್ ಪೋಷಿಸಲಿದ್ದಾರಂತೆ. ಯಥಾಪ್ರಕಾರ, ಈ ಚಿತ್ರಕ್ಕೂ ದೊಡ್ಡ ಮೊತ್ತದ ಸಂಭಾವನೆ ಅವರ ಕೈ ಸೇರಲಿದೆ. ರಾಜಮೌಳಿ ಅವರ 'ಈಗ' ಚಿತ್ರದ ನಂತರ ಸುದೀಪ್ ದಕ್ಷಿಣ ಭಾರತದ ಚಿತ್ರರಂಗದ ಪರಿಚಿತ ಮುಖಗಳಲ್ಲೊಂದಾಗಿ ಗುರ್ತಿಸಿಕೊಂಡಿದ್ದಾರೆ. ಹೀಗೆ, ಬೇರೆ ಬೇರೆ ಭಾಷೆಗಳ ಚಿತ್ರಗಳಲ್ಲಿ ನಟಿಸುತ್ತಲೇ ಕನ್ನಡ ಸಿನಿಮಾದಲ್ಲೂ ತಾರಾ ವರ್ಚಸ್ಸು ಉಳಿಸಿಕೊಂಡಿರುವ ಸುದೀಪ್, ಕ್ರಿಕೆಟ್ ಭಾಷೆಯಲ್ಲಿ ಹೇಳುವುದಾದರೆ– 'ಆಲ್‌ರೌಂಡರ್' ಆಗಲು ಹೊರಟಂತಿದೆ.

■ ರಘು